ಕರ್ನಾಟಕ ಸರ್ಕಾರ

ಸಂ. ಸಿಆಸುಇ 95 ಪಿಪಿಜಿ 2009

ಕರ್ನಾಟಕ ಸರ್ಕಾರದ ಸಚಿವಾಲಯ
5ನೇ ಹಂತ, 2ನೇ ಮಹಡಿ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ : 21/09/2010

ಇವರಿಂದ :

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ)
ಕರ್ನಾಟಕ ಸರ್ಕಾರ,
ಬೆಂಗಳೂರು 560 001.

ಇವರಿಗೆ :

ಎಲ್ಲಾ ಜಿಲ್ಲಾಧಿಕಾರಿಗಳಿಗೆ,

ಮಾನ್ಯರೆ,

ವಿಷಯ : 1955-56 ರಲ್ಲಿ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ರಾಜ್ಯ ಗೋವಾ ಗೌರವಧನ ಮಂಜೂರು ಮಾಡುವ ಬಗ್ಗೆ.

=====

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಗೋವಾ ಗೌರವಧನ ಮಂಜೂರು ಮಾಡಲು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 95 ಪಿಪಿಜಿ 2009, ದಿನಾಂಕ : 22/12/2009 ರಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದ್ದು, ಪರಿಷ್ಕೃತ ಮಾರ್ಗಸೂಚಿಯನುಸಾರ, ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ರಾಜ್ಯ ಗೋವಾ ಗೌರವಧನ ಮಂಜೂರು ಮಾಡುವ ಬಗ್ಗೆ ಅಗತ್ಯ ದಾಖಲೆಗಳನ್ನು ಅರ್ಜಿದಾರರಿಂದ ಪಡೆದು ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳನ್ನು ಕೋರಲಾಗಿತ್ತು.

ಸದರಿ ಮಾರ್ಗಸೂಚಿಯಲ್ಲಿ ದಿನಾಂಕ : 01/01/1991 ರಿಂದ 19/04/1995 ರ ಪೂರ್ಣಾವಧಿಯವರೆಗೆ ರಾಜ್ಯ ಗೋವಾ ಗೌರವಧನ ಪಡೆದಿರುವವರಿಗೆ ಮಾತ್ರ ಮರು ಮಂಜೂರಾತಿ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಬಹಳಷ್ಟು ಜಿಲ್ಲಾಧಿಕಾರಿಗಳಿಂದ ಬಂದಿರುವ ಹಲವಾರು ಪ್ರಕರಣಗಳಲ್ಲಿ 1993-94 ನೇ ಸಾಲಿನವರೆಗೆ ಮಾತ್ರ ರಾಜ್ಯ ಗೋವಾ ಗೌರವಧನ ಪಡೆದಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ, ಸರ್ಕಾರವು ಮರುಪರಿಶೀಲಿಸಿ, ದಿನಾಂಕ : 01/01/1991 ರಿಂದ 1993-94 ನೇ ಸಾಲಿನ

2ನೇ ಪುಟಕ್ಕೆ..

10



ವರೆಗೆ ರಾಜ್ಯ ಗೋವಾ ಗೌರವಧನ ಪಡೆದಿರುವಂತಹ ಪ್ರಕರಣಗಳನ್ನು ಸಹ ಅರ್ಹ ಪ್ರಕರಣಗಳೆಂದು ಪರಿಗಣಿಸಲು ತೀರ್ಮಾನಿಸಿದೆ. (ಅಂದರೆ, ದಿನಾಂಕ : 01/01/1991 ರಿಂದ 31/12/1992 ರವರೆಗೆ ರಾಜ್ಯ ಗೋವಾ ಗೌರವಧನ ಪಡೆದಿರುವ ಪ್ರಕರಣಗಳು ಅರ್ಹ ಪ್ರಕರಣವಾಗಿರುವುದಿಲ್ಲ) ಈ ಹಿನ್ನೆಲೆಯಲ್ಲಿ ಇಂತಹ ಪ್ರಕರಣಗಳು ತಮ್ಮ ಜಿಲ್ಲೆಯಲ್ಲಿ ಅರ್ಜಿದಾರರಿಂದ ಸ್ವೀಕರಿಸಿದಲ್ಲಿ, ಅಂತಹ ಪ್ರಕರಣಗಳನ್ನು ಸಹ ಮಾರ್ಗಸೂಚಿಯನುಸಾರ ಪರಿಶೀಲಿಸಿ ಅಗತ್ಯ ದಾಖಲೆಗಳೊಂದಿಗೆ ಅವುಗಳನ್ನು ಅರ್ಹ ಪ್ರಕರಣಗಳೆಂದು ಪರಿಗಣಿಸಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸಿನೊಂದಿಗೆ ಕಳುಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

K.G. Shashkal

(ಕೆ.ಜಿ. ಶಶಿಕಲಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ – ರಾಜಕೀಯ ವಿಶ್ರಾಂತಿ ವೇತನ – 2).

21/09/2010